doc-197
T-P-6

Regd No M 1299 34 th Year ತಾ 9—5—51

SATYAVADI



ಸಂಪಾದಕರು- ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಶ್ರೀ-ದ್ವಾರಕಾ ಜಗದ್ಗುರುಗಳವರು

(ಸ್ವಂ. ಸು ಕಂತಿ)

ಅಬು ಏ 7 ಕಾಸ್ಮೋರದಲ್ಲಿ ಧರ್ಮ ಸಂಘ ಕಾರ್ಯಕಲಾಪಗಳನ್ನು ಮುಗಿಸಿ ಕೊಂಡು, ಶ್ರೀ ದ್ವಾರಕಾ ಜಗದ್ಗುರು ಗಳವರು ದಿಲ್ಲಿ, ಅಂಬಾಜಿ, ಅಹಮದಾ ಬಾದಿಗೆ ಭೇಟಿ ಕೊಟ್ಟು, ನಾಂ ಟ್ ಅಬೂವಿಗೆ ಆಗಮಿಸಿದರು. ಸ್ವಭಾಸ್ ಪಟಸ್ನಲ್ಲಿ ಶ್ರೀ ಸೋಮನಾಥ ಪ್ರತಿಷ್ಠಾ ಸಮಾರಂಭಕ್ಕೆ ಶ್ರೀ ಜಗದ್ಗುರುಗಳವರು ಸ್ವಾಗತಿಸಲ್ಪಟ್ಟಿರುವರು ; ಆದರೆ ಸಮಾ ರಂಭ ಮತ್ತು ಪೂಜೆಯು ವೇದೋಕ್ತ ಮತ್ತು ಪ್ರಾಚೀನ ಪದ್ಧತಿ ರೀತ್ಯಾ ಇ ರುವುದೆಂಬುದರ ಬಗ್ಗೆ ಭರವಸೆ ದೊರೆಯ ಲಿಲ್ಲವಾಗಿ ಸಮಾರಂಭಕ್ಕೆ ಶ್ರೀ ಶ್ರೀಗಳ ವರು ದಯಮಾಡಿಸುವುದಿಲ್ಲ. ಶ್ರೀ ಜಗದ್ಗುರುಗಳವರು ಶ್ರೀ ಶಂಕರ ಜಯಂ ತಿಯನ್ನು ತಾ|| 11 ನೇ ಶುಕ್ರವಾರ ಮೌಂಟ್ ಅಬೂವಿನಲ್ಲಿ ರಘು ನಾಥಜಿ ಮಂದಿರದಲ್ಲಿ ವೈಭವದಿಂದ ಸಂವೇರ್ ಸುವರು.

ತೆರಿಗೆ ರದ್ದು

1949—50 ರಲ್ಲಿ ಮಳೆ ಅಭಾವ ದಿಸೆ ಯಿಂದ ಅನೇಕಲ್ ತಾಲ್ಲೂಕಿನ ಅರೆ ಹಳ್ಳಿ ದೊಡ್ಡ ಕೆರೆ ಕೆಳಗಿನ ವ ತರೇ ಜ ಮೀನಿನಲ್ಲಿ ಫಸಲು ಕೆಟ್ಟದ್ದರಿಂದ ಸರ ಕಾರ ಅರ್ಧ ತೆರಿಗೆ ಅಂದರೆ ರೂ. 425—೩-೦ ವನ್ನಾ ಮಾಡಿದೆ.

ಸರ್ಕಾರಿ ಪ್ರಕಟಣೆ

ಏಪ್ರಿಲ್ 1 ನೆ ತಾ|| ನಿಂದ ಎರಡು ತಿಂಗಳ ವರಿಗೆ ಫೆಬ್ರವರಿ 1 ನೇ ತಾ|| ನಿಂದ ಎರಡು ತಿಂಗಳ ಕಾಲ ಜಾರಿಗೆ ಬಂ ದ ಸಿಮೆಂಟ್ ನಿಯಂತ್ರಣವನ್ನು ಸಡಲಿ ಸುವ ಆಜ್ಞೆಯನ್ನು ಮುಂದೆ ವರಿಸಲಾಗಿ ದೆಯೆಂದು ಸರ್ಕಾರಿ ಪ್ರಕಟಣೆಯಲ್ಲಿ ತಿಳಿ ಸಲಾಗಿದೆ.

ತಿದ್ದುಪಡಿ ಬೇಡ

ಭಾರತ ಸುಪ್ರೀಂ ಕೋರ್ಟ್ ವಕೀ ಲರ ಸಂಘ ಅಡ್ವೊಕೇಟ್ ಜನೆರಲ್ ಶ್ರೀ ಸೆಟಲ್ವಾಡರಿಂದ ಅಧ್ಯಕ್ಷತೆಯಲ್ಲಿ ಮೊನ್ನೆ ಸಭೆ ಸೇರಿ ಈಗ ಭಾರತ ರಾಜ್ಯಾಂಗವ ನ್ನು ತಿದ್ದುಪಡಿ ಮಾಡುವದು ಸೂಕ್ತವಲ್ಲವೆಂದು ನಿರ್ಧರಿಸಿರುವದು ದೆಹಲಿ ವಾರ್ತೆ.

ಪ್ರಮಾಣ ಮಾಡಿದರು

ಮೊನ್ನೆ ಶ್ರೀ ಬಿ. ಪಿ. ಮೆಸರವರು ಒರಿಸ್ಸಾ ಗವರ್ನರಾಗಿ ಪ್ರಮಾಣ ಮಾ ಡಿರುವುದಾಗಿ ಕಟಕ್ ವಾರ್ತೆ.

ಗಲಭೆ ಬಗ್ಗೆ ಸರ್ಕಾರಿ ಪ್ರಕಟಣೆ ಕಾನಲುಗಾರನ ದುರಂತ

ಬೊಂಬಾಯಿ ಕೋಮುವಾರು ಗಲ ಭೆ ಬಗೆಗೆ ಸರ್ಕಾರಿ ಪ್ರಕಟಣೆ ಹೊರಟು ಗಲಭೆ ಸಂಬಂಧದಲ್ಲಿ ಒಟ್ಟು 63 ಮಂದಿ ಬಂಧಿತರಾಗಿರುವದಾಗಿ ತಿಳಿಸಿದೆ. ಕಾ ಮಾಟಿಪುರದಲ್ಲಿ ಸೂಳೆಯೋರ್ವಳ ಮನೆ ಯಲ್ಲಿ ಕಲಹ ನಡೆದು ಬೀಗನೆ 2 ಪಂಗಡ ಗಳಲ್ಲಿ ಹೊಡೆದಾಟವಾಂಭವವಾಯಿತು. ಸಣ್ಣಪುಟ್ಟ ಇರಿತಗಳು ಸಂಭವಿಸಿದವು ಪೋಲೀಸರು ಗುಂಡು ಹಾರಿಸಿ ಪರಿಸ್ಥಿತಿ ಯನ್ನು ಹದಕ್ಕೆ ತಂದರು.

21 ಮಂದಿ ಬೊಂಬಾಯಿ ಗಲಭೆಯ ಲ್ಲಿ ಗಾಯಗೊಂಡಿದ್ದಾರೆ.

ಟ್ರೂಮ್ಯಾ ಹೇಳಿಕೆ

ವಾಷಿಂಗ್ಟನ್‌ನಲ್ಲಿ ಅಧ್ಯಕ್ಷ ಟ್ರೂಮ್ಯಾ ನ್ನು ಮೊನ್ನೆ ರಾತ್ರಿ ಹೇಳಿಕೆ ಇತ್ತು ಏ ಷ್ಯದಲ್ಲಿ ಕಮ್ಯುನಿಸಂ ಓಟವನ್ನು ಕಡಿತು ಲಾಗಿದೆಯೆಂದರು.

ಅಂಗೀಕರಿಸಲಿದೆ

ಬ್ರಿಟಿಷ್ ಹಾಗೂ ಫ್ರೆಂಚ್ ರಾಜ್ಯ ಗಳು ಕೆಂಪು ಚೀನ ಮೇಲೆ ಆರ್ಥಿಕ ಬಿ ಗ್ಗಂಧನ ವಿಧಿಸುವ ಅಮೇರಿಕ ಸೂಚನೆ ಯನ್ನು ಅಂಗೀಕರಿಸಲಿದೆ ಎಂದು ನ್ಯೂ ಯಾರ್ಕ್ ವಾರ್ತೆ. --

ಭಾರತಕ್ಕೆ ಧಾನ್ಯ

ವಿದೇಶಿ ಜನರು ಭಾರತ ರಾಯಭಾರಿ ಕಚೇರಿಗೆ ಧಾನ್ಯವನ್ನು ತಲುಪಿಸುತ್ತಿರುವ ಅಂತರವನ್ನು ಭಾರತ ಪಾರ್ಲಿಮೆಂಟಿನ ಗ ಮನಕ್ಕೆ ಪಂ|| ನೆಹರು ನಿನ್ನೆ ತಂದರು.

ಹೆಂಗಸರೇ ಪ್ರವೀಣರು

ಮೋಟಾರ್‌ಕಾರ್ ನಡೆಸುವದರಲ್ಲಿ ಮಹಿಳೆಯರೇ ಬುದ್ಧಿವಂತರೆಂದು ಆಕ್ಸ್ ಫರ್ಡ್ ಪ್ರೊಫೆಸರ್‌ರೋರ್ವರು ಅಭಿಪ್ರಾ ಯಪಟ್ಟಿರುವರೆಂದು ಲಂಡನ್ ವಾರ್ತೆ.

ಗೋಕಾಕ ವಾರ್ತೆ ಹೀಗಿದೆ. ಇಲ್ಲಿ ಯ ಗೂರ್ಕ ಕಾವಲುಗಾರನೊಬ್ಬನು ತಾನು ಪ್ರೀತಿಸುತ್ತಿದ್ದ ಮುಸಲ್ಮಾನ ಕ ಣಿಯನ್ನು ತಾನು ವಿವಾಹವಾಗಲು ವಿ ಘ್ನವೊದಗಿದ್ದರಿಂದ ನಿನ್ನೆ ಮಧ್ಯಾಹ್ನ ತ ನ್ನ ಮನೆಯಲ್ಲಿ ಬಾಗಿಲು ಹಾಕಿ ಒಳಬಿ ಲ್ಲಕವನ್ನು ಹಾಕಿ ಆ ತರುಣಿಯು ಕುತ್ತಿಗೆ ಯನ್ನು ತನ್ನ ಕೃಪಾಣದಿಂದ ಕೊಯ್ದು ಅದೇ ಕೃಪಾಣದಿಂದ ಹೊಟ್ಟೆಯಲ್ಲಿ ಇ ರಿದುಕೊಂಡನು. ಈ ವಿವರವನ್ನು ಕೇ ಳಿ ಜನರು ನೆರೆದು ಬಾಗಿಲು ಮುರಿದು ಒ ಳ ಹೊಕ್ಕು ನೋಡುವಷ್ಟರಲ್ಲಿ ಇಬ್ಬರ ಮೃತ ದೇಹಗಳು ಬಿದ್ದಿದ್ದವು. ಈ ಊರಲ್ಲೆಲ್ಲ ಕೋಲಾಹಲವೆದ್ದಿದೆ.

ಆಗಮನ

ಸರ್ ಮಿರ್ಜ ಮೊಸ್ತೆ ಲಂಡನ್‌ನಿಂದ ಬೊಂಬಾಯಿಗೆ ಆಗಮಿಸಿದರು.

ದಿನಕ್ಕೆ ಹತ್ತಾಣೆ

ಭಾರತದಲ್ಲಿ ಪ್ರತಿಯೋರ್ವನ ನಿತ್ಯದ ಸಂಪಾದನೆ ಸರಾಸರಿ ಹತ್ತಾಣೆ ಎಂದು ವರದಿಯಾಗಿದೆ

ಸಾವು ನೋವು

ಬೊಂಬಾಯಿ ಕೋಮುವಾರು ಗಲ ಭೆಯಲ್ಲಿ ಮೃತರು ತೀರಿ ಹೋದರೆಂದು ವರದಿಯಾಗಿದೆ.

ಹುಬ್ಬಳ್ಳಿಯಲ್ಲಿ ಲಕ್ಷ್ಮಣ್ ಜೋಜ ಗಾರ ಎಂಬ 20 ವರ್ಷದ ಹೆಂಗಸೊಬ್ಬ ಳು ತನ್ನ ಕೇವಲ ನಾಲ್ಕು ತಿಂಗಳ ಕೂ ಸಿನೊಡನೆ ವಿಕ್ಟೋರಿಯಾ ರಸ್ತೆಯಲ್ಲಿನ ಭಾವಿಗೆ ಬಿದ್ದು ಸತ್ತಳು.

ಲೋಕಮಾನ್ಯ ತಿಲಕ ಜಯಂತಿಯಂ ದು ಸಾಂಗಲಿ ಪೌರಸಭೆಗೆ ರಜ ಕೊಡುವ ನಿರ್ಣಯವಾಗಿದೆ

ಪರದೇಶಿಯರಿಂದ ಬಿಡ್ಡಿಸಿಕೊಳ್ಳಲಿ

ಪ್ಯಾರಿಸಿನಲ್ಲಿ ಸಮಾವೇಶವಾಗಿದ್ದ ಸಾಮ್ರಾಜ್ಯಶಾಹಿ ವಿರೋಧ ಪಂಚಮಿ ಗೆ ಸೋಷಲಿಸ್ಟ್ ಧುರೀಣ ಡಾ|| ರಾಂ ಮನೋಹರ ಲೋಹಿಯ ಸಂದೇಶ ಕಳಿ ಸಿ ಈ ವರ್ಷದಲ್ಲೇ ಆಫ್ರಿಕನರು ತಮ್ಮ ದೇಶವನ್ನು ಪರದೇಶದವರಿಂದ ಬಿಡಿಸಿ ಕೊಳ್ಳಬೇಕು — ಎಂದು ತಿಳಿಸಿರುವರು

ಮಹಾ ಚುನಾವಣೆ

ಫ್ರಾನ್ಸಿನಲ್ಲಿ ಮಹಾ ಚುನಾವಣೆ ಜೂನ್ 17 ರಲ್ಲಿ ಜರುಗಬೇಕೆಂದು ಪ್ಯಾ ರಿಸ್ ನಲ್ಲಿ ಸಮಾವೇಶವಾಗಿದ್ದ ರಾಷ್ಟ್ರೀಯ ಮಹಾಸಭೆ ನಿಗದಿ ಮಾಡಿತು.

ಮೈಸೂರಿಗೆ ಸಾಲಾ ಸಿಕ್ಕುತ್ತೆ

ಭಾರತ ಸರ್ಕಾರ ಈ ವರ್ಷ ಮೈ ಸೂರು ಸಂಸ್ಥಾನಕ್ಕೆ ಇನ್ನೂ ಒಂದೂ ವರೆ ಕೋಟಿ ರೂ ಸಾಲ್ಲ ಮಂಜೂರು ಮಾಡಬಹುದೆಂದು ದೆಹಲಿ ವಾರ್ತೆ.

ರಾಜೇಂದ್ರರಿಗೆ ಅಕ್ಕಿ

ಇಂದೂರಿಗೆ ನಿನ್ನೆ ಆಗಮಿಸಿದ ರಾ ಷ್ಟ್ರಾಧಿಪತಿಗಳನ್ನು ರಾಜಸ್ರವಮುಖರವ ರೇ ಕಾರಿನಲ್ಲಿ ಕರೆದುಕೊಂಡು ಹೋದ ರು. ದೇವಾಸಿಗೆ ರಾಜೇಂದ್ರರು ಬಂ ದಾಗ ಕಾಂಗ್ರೆಸ್ ಸಮಿತಿಯವರು ಅವ ರಿಗೆ ಬಿಹಾರಿನ ನೊಂದವರಿಗೆಂದು ಸಾ ವಿರದೊಂದು ಮಣ ಅಕ್ಕಿ ಅರ್ಪಿಸಿದರು.

ಗಲ್ಲಿಗೇರಿಸಲಾಯಿತು

ಮಿಸಿಸಿಪ್ಪಿಯ ಲಾರೆಲ್‌ನಲ್ಲಿ ವಿಲ್ಲಿ ಮೆಕ್‌ಗೀ ಎಂಬ 37 ವರ್ಷದ ನಿಗ್ರೋವ ನ್ನು ನಿನ್ನೆ ನೇಣು ಹಾಕಲಾಯಿತು. ಕ ಳೆದ 5 ವರೆ ವರ್ಷಗಳ ಹಿಂದೆ ಅವನು ಬಿಳಿ ಹೆಂಗಸಿನ ಮೇಲೆ ಅತ್ಯಾಚಾರ ನ ಡಿದ್ದ

ಗೋಧಿ ಬಂದಿದೆ

ಮುದರಾಸಿಗೆ ಅರ್ಜಂಟೈನದಿಂದ ಗೋ ಧಿ ಬಂದಿದೆ ಹಾಗೆ ಬಂದಿರುವ 9473 ಟ್ಸ ಗೋಧಿಯಲ್ಲಿ ಸಾವಿರ ಟನ್ನು ಮೈ ಸೂರು ಪಾಲಿನದು.

ಈ ವರ್ಷವೇ ಸಾಧ್ಯ

ಈ ವರ್ಷದಿಂದಲೇ ತುಂಕೂರಿನಲ್ಲಿ ಬಿ ಎ. ತರಗತಿ ಪ್ರಾರಂಭವಾಗುವ ವರ ದಿಯಿದೆ.

ಸಂಮೇಳನ

ದಾವಣಗೆರೆಯಲ್ಲಿ ಇದೇ ತಾ|| 18 ಮತ್ತು 19 ರಲ್ಲಿ ವೈಸೂರು ಸಂಸ್ಥಾನದ ಹೆಲ್ತ್ ಇನ್‌ಸ್ಪೆಕ್ಟರುಗಳ 5 ನೇ ಸಂಮೇಳನ ಸೇರಲಿದೆ.

ಗೋ ಮಾತೆಗೆ ನಮ್ಮ ಕಾಣಿಕೆ

(ಇ. ಬಿ ವಿಸ್ಕೆಟ್, ಸ್ಟೇಟ್ ಡೈರಿ ಕಮಿಷನರ್ ರವರಿಂದ)

ಗೋವಿಗೆ ತಾನು ಎಷ್ಟು ಋಣಿಯಾಗಿರುವನೆಂಬ ವಿಷಯವನ್ನು ಮನುಷ್ಯನು ಅರಿಯಲಾರನು. ಅನಾಗರಿಕ ಅಂಧಕಾರ ಯುಗದಲ್ಲಿ, ಆಕೆಯ ಮೂಲ ಪುರುಷರೇ ಪ್ರಪಂಚದ ಅರಣ್ಯವಾಸಿಗಳಾಗಿದ್ದದ್ದು. ನಾಗರೀಕತೆಯು ಹೆಚ್ಚಿದಂತೆಲ್ಲಾ ಆಕೆಯು ತನ್ನ ಏಕಾಂತ ನಿವಾಸ ಸ್ಥಾನದಿಂದ ಹೊರಗೆ ಬಂದು ನಮ್ಮ ಅಭ್ಯುದಯ ಮಾರ್ಗದಲ್ಲಿ ನೆರವಾಗುತ್ತಿದ್ದಾಳೆ,

ಕಳೆದ 20 ಶತಮಾನಗಳಿಂದ ಆಕೆಯು ಮನುಷ್ಯನೊಂದಿಗೆ ಅವನ ಕಷ್ಟ ಸುಖಗಳಲ್ಲಿ ಸಹಭಾಗಿಯಾಗಿದ್ದಾಳೆ ಆಕೆಯು ಅಭಿವೃದ್ಧಿಯಿಂದ ದೇವತಾ ದೂತಳಾಗಿ ಪರಿಣಮಿಸಿದ್ದಾಳೆ.

ಕೊಲಂಬಸ್ಸನು ಎಡಡನೆಯ ಬಾರಿ 1493 ರಲ್ಲಿ ಅಮೇರಿಕಾಕ್ಕೆ ಸಮುದ್ರ ಯಾನವನ್ನು ಬೆಳೆಸಿದಾಗ ಗೋಮಾತೆಯು ಅತನೊಂದಿಗೆ ಒಂದಳು : ಅಂದಿನಿಂದ ಇಂದಿನವರೆಗೂ ಆಕೆಯು ಅಮೇರಿಕನ್ನರನ್ನು ದೊಡ್ಡ ಜನತಾಂಗವಾಗಿ ಮಾಡುವ ಕಾರ್ಯದಲ್ಲಿ ಒಳ್ಳೆಯ ಸಹಾಯ-ಕಳಾಗಿದ್ದಾಳೆ

ನಮ್ಮ ಪಿತೃಗಳ ಜೀವಿಗನನ್ನು ಉಳಲು ಆಕೆಯು ಸಹಾಯಕಳಾದಳು ; ಜಪಾನಿನಲ್ಲಿ ಬೆಳೆದ ಪದಾರ್ಥಗಳನ್ನು ಮಾರ್ಕಟ್ಟಿಗೆ ಸಾಗಿಸಲು ನೆರವಾದಳು. ನೂತನ ಪ್ರಪಂಚದ ಘೋರಾರಣ್ಯಗಳಿಗೆ ಆಕೆಯು ಮನುಷ್ಯನೊಂದಿಗೆ ಹೋಗಿ, ಆ ಪ್ರದೇಶಗಳನ್ನು ಸಮೃದ್ಧಮಾಡಿ ಮುಂದಿನ ಸಂತತಿಗೆ ಬೆಳೆಯು ಬೆಳೆಯುವಂತೆ ಮಾಡಿದಳು.

ಪಶ್ಚಿಮ ದಿಶೆಯಲ್ಲಿ ಜನರು ವಲಸೆ ಹೋದಾಗ ಅವರ ಪದಾರ್ಥಗಳನ್ನು ಸಮೃದ್ಧವಾದ ಭೂಮಿಗಳ ಮೂಲಕವೂ ದೊಡ್ಡದೊಡ್ಡ ಪರ್ವತಗಳ ಮೂಲಕವೂ ಸಾಗಿಸಿದ್ದು ಎತ್ತು.

ಗೋವು ಮನುಷ್ಯನಿಗೆ ಹೆಚ್ಚು ಉಪಕಾರಿಯು. ಎಂಥಾ ಕಷ್ಟಕಾಲದಲ್ಲಿಯಾಗಲಿ, ವಿಷಮ ಸಮಯಗಳಲ್ಲಿಯಾಗಲೀ ಆಕೆಯು ಮನುಷ್ಯನ ಬೆಳವಣಿಗೆಗೆ ಮತ್ತು ಶಕ್ತಿಗೆ ಅವಶ್ಯಕವಾಗಿರುವ ಆಹಾರವನ್ನು ಕೊಡುತ್ತಾಳೆ

ಸ್ವಸದಲ್ಲಿ ಸೌಖ್ಯವಿಲ್ಲದ ಹೆಂಗಸರ ಮತ್ತು ನಿರ್ದಯರಾದ ಹೆಂಗಸರ ಮಕ್ಕಳಿಗೆ ಗೋವು ಜೀವನ ರೂಪಳು.

ಆಕೆಯ ಸಾಧುತ್ವಕ್ಕಾಗಿ ನಾವು ಆಕೆಯನ್ನು ಸ್ತುತಿಸುತ್ತೇವೆ. ಆಕೆಯ ಸೌಂದರ್ಯ ಮತ್ತು ಆಕೆಯಿಂದಾಗುವ ಉಪಯೋಗಗಳಿಗಾಗಿ ಆಕೆಯನ್ನು ಪ್ರೀತಿಸುತ್ತೇವೆ. ಆಕೆಯ ವಿಧೇಯತ್ವಕ್ಕೆ ಎಂದಿಗೂ ಚ್ಯುತಿಯು ಬರುವುದಿಲ್ಲ. ನನಗೆ ಮುದಿತನ ಬಂದು ಕಷ್ಟಗಳು ಬಂದೊದಗಿದಾಗ, ತನ್ನ ಕರ್ತವ್ಯದಿಂದ ಹಿಂತೆಗೆಯದ ಸಹಾಯಕಳು ಗೋವು. ಆಕೆಯು ಋಣವನ್ನು ತೀರಿಸುತ್ತಾಳೆ ಮತ್ತು ಗೃಹವನ್ನು ರಕ್ಷಿಸುತ್ತಾಳೆ. (ಆಂಗ್ಲೇಯ ಗ್ರಂಥದಿಂದ ಅನುವಾದ)



"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

ಉಡ್‌ಲ್ಯಾಂಡ್ಸ್

ಅಮೋಘ 2-ನೇ ವಾರ

ಹನುಮಾನ್ ಪಾತಾಳ ವಿಜಯ

ಪಾತ್ರ : ವಿಮಾನಕುಮಾರಿ, ಮಹಿಪಾಲ್

— ಪ್ರತಿದಿನ 3 ಆಟಗಳು —

ರಣಜಿತ್ ಮನರಂಜನ 3-ನೇ ವಾರ

PARDES ಪರದೇಸ್

ಮಧುಬಾಲ, ರೆಹಮಾನ್, ಶಕುಂತಲಾ, ಜಗದೀಶ ಸೇಥಿ, ಕರ್ಣ ದಿವಾನ್

ಪಾತ್ರವಹಿಸಿರುವ ಸೊಬಗಿನ ಹಿಂದಿ ಚಿತ್ರ

— ಪ್ರತಿದಿನ 3 ಪ್ರದರ್ಶನಗಳು —

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಏನೆನೂ ಕೆಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸಲಭ ಬೆಲೆಗೆ ಮಾರಾಟಕ್ಕಿವೆ

ವಿವರಗಳಿಗೆ—

ನ್ಯೂ ಅಪೇರಾ ಟಾಕೀಸ್

ಮೈಸೂರು



ಅತ್ಯಂತ ಆಧುನಿಕ ಬೆಂಕಿ ಆರಿಸುವ ಯಂತ್ರ

Edited, Printed and Published by M. S. Krishna Rao, at the Satyavadi Press Chamarajapuram Mysore